ಭಾವಿಸಿಕೊಂಡು ನೆಮ್ಮದಿಯಿಲ್ಲದೆ ಅಲ್ಲಿ–ಇಲ್ಲಿ ಅದನ್ನು ಹುಡುಕುತ್ತಲೇ ಇರುತ್ತೇವೆ; ನಿರ್ವಾಣ ಎಂದರೆ ಬದುಕಿನಿಂದ ಓಡಿಹೋಗುವುದು ಎಂದು ಭ್ರಮಿಸುತ್ತೇವೆ. ಈ ಎಲ್ಲವನ್ನೂ ಹೊಂದಲು ಏನೇನೋ ವಿದ್ಯೆಗಳನ್ನು (ಅಥವಾ ದುರ್ವಿದ್ಯೆಗಳನ್ನು) ಕಲಿಯುತ್ತಲೇ ಇರುತ್ತೇವೆ, ಅಲ್ಲವೆ?

ಗುಹೆಯಲ್ಲಿದ್ದ ಆ ಗುರು ಕೂಡ ಏನೇನೋ ವಿದ್ಯೆಗಳನ್ನು ಕಲಿಯುತ್ತಿದ್ದವನು. ಪ್ರಾಣಿಗಳಿಂದಲೂ ವಿದ್ಯೆ ಕಲಿಯುತ್ತಿದ್ದವನು. ಆದರೆ ಆ ವಿದ್ಯೆಗಳ ಪ್ರಯೋಜನ ಏನು – ಎಂದು ಒಂದು ಕ್ಷಣವೂ ಅವನು ಯೋಚಿಸಿದಂತೆ ಅನಿಸುವುದಿಲ್ಲ. ಒಬ್ಬ ವ್ಯಕ್ತಿ ಎಷ್ಟು ವಿದ್ಯೆಗಳನ್ನು ಕಲಿಯಬಹುದು? ಇಷ್ಟಕ್ಕೂ ವಿದ್ಯೆ ಎಂದರೇನು? ಇಲ್ಲಿ ವೇದದ ಕಥೆಯೊಂದು ನೆನಪಾಗುತ್ತದೆ:

ಮಹರ್ಷಿ ಭರದ್ವಾಜರು ಅವರ ಆಯುಸ್ಸಿನ ಮುಕ್ಕಾಲು ಭಾಗ ಗುರುಕುಲದಲ್ಲಿಯೇ ಇದ್ದರು. ಅಷ್ಟು ಕಾಲವೂ ವೇದವನ್ನು ಅಧ್ಯಯನ ಮಾಡಿ, ಹಣ್ಣು ಹಣ್ಣು ಮುದುಕರಾದರು. ಮುಪ್ಪಿನಿಂದ ನಿತ್ರಾಣಗೊಂಡಿದ್ದ ಅವರಲ್ಲಿಗೆ ಒಮ್ಮೆ ಇಂದ್ರ ಬಂದ. 'ಮಹರ್ಷಿಗಳೇ! ನಿಮ್ಮ ಆಯುಸ್ಸಿನ ನಾಲ್ಕನೇ ಭಾಗವನ್ನೂ ನಿಮಗೆ ಕೊಡುವೆ. ಆಗ ನೀವು ಏನು ಮಾಡುತ್ತೀರಿ?' ಎಂದು ಕೇಳಿದ. ಆಗ ಮಹರ್ಷಿಗಳು, 'ವೇದಾಧ್ಯಯನವನ್ನು ಮುಂದುವರೆಸುವೆ; ಪೂರ್ಣವಾಗಿ ವೇದವನ್ನು ತಿಳಿಯುವುದೇ ನನ್ನ ಬಯಕೆ' ಎನ್ನುತ್ತಾರೆ. ಆಗ ಇಂದ್ರ ಮೂರು ವೇದಪರ್ವತಗಳನ್ನು ಸೃಷ್ಟಿಸುತ್ತಾನೆ. ಅವುಗಳಿಂದ ತಲಾ ಒಂದೊಂದು ಹಿಡಿ ಮಣ್ಣನ್ನು ತೆಗೆದುಕೊಂಡ. 'ಮಹರ್ಷಿಗಳೇ! ಈಗ ನೀವು ನೀವು ಕಲಿತಿರುವ ವೇದದ ಪ್ರಮಾಣ ಈ ಮುಷ್ಟಿಯಲ್ಲಿರುವ ಮಣ್ಣಿನಷ್ಟು ಮಾತ್ರವೇ; ಉಳಿದಿರುವುದು ಆ ಪರ್ವತಗಳಷ್ಟು. ವೇದಗಳು ಅನಂತ; ಅವು ಎಂದಿಗೂ ಮುಗಿಯದ ಜ್ಞಾನರಾಶಿ' ಎನ್ನುತ್ತಾನೆ.

ಉಪನಿಷತ್ತು ಕೂಡ ಇಂಥದೇ ಉಪದೇಶವನ್ನು ಮಾಡುತ್ತದೆ. 'ಯಾವುದನ್ನು ತಿಳಿಯುವುದರಿಂದ ಎಲ್ಲವನ್ನೂ ತಿಳಿಯಲು ಸಾಧ್ಯವೋ ಅದನ್ನು ತಿಳಿದುಕೋ!' ಇದು ಉಪನಿಷತ್ತಿನ ಸಂದೇಶ ಕೂಡ. ಇದೇ ದಿಟವಾದ ಅಧ್ಯಾತ್ಮ.

ಹಾಗಾದರೆ ಯಾವುದನ್ನು ತಿಳಿದುಕೊಂಡರೆ ಎಲ್ಲವನ್ನೂ ತಿಳಿದುಕೊಂಡಂತೆ ಆಗುವುದು? ಇದನ್ನು ಹೇಳುವುದು ಕಷ್ಟ. ಅದನ್ನು ಅನುಭವದಿಂದಲೇ ಸಾಕ್ಷಾತ್ಕರಿಸಿಕೊಳ್ಳಬೇಕೆನಿಸುತ್ತದೆ. ಅದನ್ನು ಸಾಂಕೇತಿಕವಾಗಿ ಸೂಚಿಸುವುದಕ್ಕಾಗಿಯೇ 'ಹಸಿವಾದಾಗ ತಿನ್ನು, ಬಾಯಾರಿದಾಗ ಕುಡಿ, ನಿದ್ರೆ ಬಂದಾಗ ಮಲಗು' ಎಂದಿರುವುದು. ಸಹಜವಾಗಿರುವುದನ್ನು ಕಲಿಯಬೇಕು; ಇದೇ ದಿಟವಾದ ವಿದ್ಯೆ. ನಮ್ಮನ್ನು ನಾವು ತಿಳಿದುಕೊಂಡರೆ ಮಾತ್ರವೇ ಈ ಸಹಜತೆ ನಮಗೆ ಒದಗಬಲ್ಲದು. ಈ ಸಹಜತೆಯ ಧ್ವನಿಯಾಗಿ ಮುಲ್ಲಾ ಹೇಳಿದ್ದು: 'ಮೀನನ್ನು ತಿಂದು ಬದುಕಿದೆ.' ಅನ್ನದಿಂದಲೇ, ಎಂದರೆ ಆಹಾರದಿಂದಲೇ ಇಡಿಯ ಸೃಷ್ಟಿಯ ಸೃಷ್ಟಿ ಇರುವುದು – ಎನ್ನುತ್ತದೆ, ಉಪನಿಷತ್ತು. ಇದು ಸೃಷ್ಟಿಯ ಸಹಜತೆ. ನಾವು ತಿಳಿಯಬೇಕಾದ ವಿದ್ಯೆ ಇದೇ. ಎಂದರೆ ಒಬ್ಬರು ಇನ್ನೊಬ್ಬರನ್ನು ಕೊಂದು ತಿನ್ನಬೇಕು ಎಂದಲ್ಲ; ಎಲ್ಲರೂ ಎಲ್ಲರನ್ನೂ ಆಶ್ರಯಿಸಿರುವುದೇ ಜಗದ ನಿಯಮ. ಹೀಗೆ ಎಲ್ಲರೂ ಋಣದಲ್ಲಿ ಬದಕುವವರೇ ಹೌದು. ಇಂಥ ಅರಿವು ಬಂದಾಗ ಮೇಲು–ಕೀಳುಗಳು ನಮ್ಮನ್ನು ಕಾಡದು; ಒಬ್ಬರು ಇನ್ನೊಬ್ಬರನ್ನು ಮೋಸ ಮಾಡಬೇಕೆಂಬ ಬುದ್ಧಿಯೂ ಹುಟ್ಟದು. ಸೃಷ್ಟಿಯ ಸಹಜ ನಿಯಮಗಳನ್ನು ನಾವು ಅರ್ಥಮಾಡಿಕೊಳ್ಳದೆ, ವ್ಯರ್ಥವಾಗಿ ಏನೇನೋ ಕಲಿಯಲು ಉತ್ಸುಕರಾಗುತ್ತೇವೆ. ನಮ್ಮ ಮನೆಯಲ್ಲಿ ಎಲ್ಲಿ ಏನಿದೆ ಎಂದು ನಮಗೆ ಗೊತ್ತಿರುವುದಿಲ್ಲ; ಆದರೆ ಬ್ರಹ್ಮಾಂಡದಲ್ಲಿ ಎಲ್ಲಿ ಯಾವ ನಕ್ಷತ್ರ, ಯಾವ ಗ್ರಹ ಇದೆ – ಎಂಬ ಚಿಂತೆ ನಮ್ಮದು. ಇಂಥ ಅನ್ವೇಷಣೆ ತಪ್ಪಲ್ಲ; ಆದರೆ ಅದು ಅನ್ವೇಷಣೆಗಾಗಿ ಅನ್ವೇಷಣೆ ಎಂಬಂತೆ ಆಗಬಾರದು. ನಮ್ಮ ಎಲ್ಲ